# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.447/2013

| ಚಾಸಾ | **1** | ಪ್ರಾಸಾ | **4** |
|---|---|---|---|
| ಹೆಸರು | | ಎ.ಆರ್ ಮೋಹನ್ | |
| ತಂದೆಯ ಹೆಸರು / ಗಂಡನ ಹೆಸರು | | ರಾಜಶೇಖರ್ | |
| ವಯಸ್ಸು | | **50** ವರ್ಷಗಳು | |
| ಉದ್ಯೋಗ | | ಎ.ಎಸ್.ಐ, ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ, | |
| ವಿಳಾಸ | | ಚನ್ನಪಟ್ಟಣ | |

ದಿನಾಂಕ.**19.06.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ನವೆಂಬರ್ **2010** ರಿಂದ ಜೂನ್ **2014**ರ ವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ **1** ರಿಂದ **3** ಮತ್ತು **5**ನೇ ಆರೋಪಿತರು ನನಗೆ ಗೊತ್ತು ಮತ್ತು ಈ ದಿನ ಹಾಜರಿಲ್ಲದೆ ಇರುವ **4**ನೇ ಆರೋಪಿಯು ನನಗೆ ಗೊತ್ತು.

ದಿನಾಂಕ.**04.05.2012**ರಂದು ನನ್ನನ್ನು ಚಾಸಾ-**8** ರವರು ಮೊಕದ್ದಮೆ ಸಂಖ್ಯೆ **107/2012**ರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಕುಮಾರ, ತಿಮ್ಮರಾಯಿ ಮತ್ತು ಇತರರನ್ನು ಪತ್ತೆ ಮಾಡುವ ಕೆಲಸಕ್ಕೆ ನೇಮಿಸಿದ್ದರು. ಅದರಂತೆ ನಾನು ನಮ್ಮ ಠಾಣೆಯಿಂದ ಬಾತ್ಮಿದಾರರಿಂದ ಬಂದ ಮಾಹಿತಿಯ ಮೇರೆಗೆ ಮುರುಳಿದೊಡ್ಡಿ ಗ್ರಾಮದಲ್ಲಿ ಅರೋಪಿತರು ಇದ್ದಾರೆ ಎಂದು ಬಂದ ಖಚಿತ ಮಾಹಿತಿಯ ಮೇರೆಗೆ ಸಂಜೆ **5ಃ00** ಗಂಟೆಗೆ ಆ ಗ್ರಾಮಕ್ಕೆ ಹೋಗಿರುತ್ತೇನೆ. ಸದರಿ ಗ್ರಾಮದಲ್ಲಿದ್ದ **1**ನೇ ಆರೋಪಿಯ ಮನೆಯ ಬಳಿ ಹೋದಾಗ ಅಲ್ಲಿ **1**ನೇ ಆರೋಪಿಯು ಅವರ ಮನೆಯ ಮುಂದೆ ನಿಂತಿದ್ದು, **1**ನೇ ಆರೋಪಿಯನ್ನು ಕರೆದುಕೊಂಡು ರಸ್ತೆಗೆ ಬಂದಾಗ **1**ನೇ ಆರೋಪಿಯ ಹೆಂಡತಿಯಾದ ಶಾಂತಿ ರವರು ಮನೆಯ ಒಳಗಿನಿಂದ ನನ್ನ ಗಂಡನನ್ನು ಪೊಲೀಸರು ಹಿಡಿದುಕೊಂಡು ಹೋಗುತ್ತಿದ್ದಾರೆ ನಾನು ವಿಷ ಕುಡಿದಿದ್ದೇನೆಂದು ಕೂಗಾಡಿಕೊಂಡು ಹೊರಗೆ ಬಂದರು. ಆಗ **1**ನೇ ಆರೋಪಿಯು ತಮ್ಮ ಕೈಯಿಂದ ನನ್ನ ಮುಖಕ್ಕೆ ಗುದ್ದಿದ್ದರು. ಅಲ್ಲೆ ಇದ್ದ **1**ನೇ ಆರೋಪಿಯ ಅಣ್ಣನ ಹೆಂಡತಿಯಾದ ಕಲಾವತಿ ರವರು ಹಿಟ್ಟಿನದೊಣ್ಣೆಯಿಂದ ನನ್ನ ಎಡತೋಳಿಗೆ ಮತ್ತು ಎಡಗಾಲಿಗೆ ಹೊಡೆದು ಗಾಯಪಡಿಸಿದರು. ಆಗ **1**ನೇ ಆರೋಪಿಯು ಇವರು ಪೊಲೀಸ್ ಆದರೇನು ಮನೆಯ ಒಳಗಿನಿಂದ ಹಗ್ಗ ಮತ್ತು ಸೀಮೆಎಣ್ಣೆ ತೆಗೆದುಕೊಂಡು ಬಾ ಎಂದಾಗ ಕಲಾವತಿ ರವರು ಮನೆಯ ಒಳಗೆ ಹೋಗಿ ಪ್ಲಾಸ್ಟಿಕ್ ಹಗ್ಗ ಮತ್ತು ಸೀಮೆಎಣ್ಣೆ ಇರುವ ಪ್ಲಾಸ್ಟಿಕ್ ಬಾಟಲಿಯನ್ನು ತೆಗೆದುಕೊಂಡು ಬಂದರು. ನಂತರ **1**ನೇ ಆರೋಪಿಯು ನನ್ನನ್ನು ಪ್ಲಾಸ್ಟಿಕ್ ಹಗ್ಗದಿಂದ ಅಲ್ಲೆ ಇದ್ದ ತೆಂಗಿನ ಮರಕ್ಕೆ ಕಟ್ಟಿದ್ದರು. ನಂತರ ಆರೋಪಿತರು ಎಲ್ಲರೂ ಸೇರಿಕೊಂಡು ನನಗೆ ದೊಣ್ಣೆಯಿಂದ ಮತ್ತು ಕೈಗಳಿಂದ ನನ್ನ ಮೈಗೆಲ್ಲಾ ಹೊಡೆದರು. ನಂತರ **1**ನೇ ಆರೋಪಿಯು ಇವನು ಪೊಲೀಸ್ ಆದರೇನು ಇತನನ್ನು ಬೆಂಕಿ ಹಚ್ಚಿ ಸುಟ್ಟು ಹಾಕಿಬಿಡೋಣ ಎಂದು ಬೆದರಿಕೆ ಹಾಕುತ್ತ ನನ್ನ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದರು.

ಸ್ವಲ್ಪ ಸಮಯದ ನಂತರ ಹಾರೋಹಳ್ಳಿ ಪೊಲೀಸ್ ಠಾಣೆಯಿಂದ ಎಎಸ್ಐ ಸತ್ಯನಾರಾಯಣ, ಹೆಚ್.ಸಿ ಮರಿಗೌಡ, ಪಿಸಿ ಮಹದೇವಯ್ಯ ಮತ್ತು ಪಿಸಿ ಪ್ರಕಾಶ್ ಕುಮಾರ್ ರವರು ಅಲ್ಲಿಗೆ ಬಂದು

ನನ್ನನ್ನು ಬಿಡಿಸಿಕೊಂಡು ಕಾಪಾಡಿದರು. ನಂತರ 1ನೇ ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದರು. ನಂತರ ಪೊಲೀಸ್ ಠಾಣೆಯಲ್ಲಿ ನಾನು ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿತರ ವಿರುದ್ದ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದಾಖಲೆಯು ದೂರು ಆಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ದೂರು ಕೊಟ್ಟನಂತರ ನಾನೇ ಸ್ವತಃ ಕನಕಪುರದ ಸರ್ಕಾರಿ ಆಸ್ಪತ್ರೆಗೆ ರಾತ್ರಿ 11ಃ15ಕ್ಕೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

ದೂರು ಪಡೆದ ನಂತರ ದಿನಾಂಕ.09.05.2012ರಂದು ನಾನು ತೋರಿಸಿದ ಸ್ಥಳದಲ್ಲಿ ನನ್ನ, ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಆ ದಿನ ಬೆಳಿಗ್ಗೆ 10ಃ00 ರಿಂದ 10ಃ30 ಗಂಟೆಯವರೆಗೆ ಜರುಗಿಸಲಾಗಿರುತ್ತದೆ. ಪಂಚನಾಮೆಯ ಸಮಯದಲ್ಲಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಒಂದು ಹಿಟ್ಟಿನದೊಣ್ಣೆ ಮತ್ತು ಒಂದು ಪ್ಲಾಸ್ಟಿಕ್ ಹಗ್ಗ ಹಾಗೂ ಎರಡು ಲೀಟರ್ ಸಾಮಾರ್ಥ್ಯದ ಪ್ಲಾಸ್ಟಿಕ್ ಸೀಮೆಎಣ್ಣೆ ಬಾಟಲ್ ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದಾಖಲೆಯು ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಹಿಟ್ಟಿನದೊಣ್ಣೆ, ಒಂದು ಪಾಸ್ಟಿಕ್ ಹಗ್ಗ ಮತ್ತು ಸ್ವಲ್ಪ ಸೀಮೆಎಣ್ಣೆ ಇರುವ ಪಾಸ್ಟಿಕ್ ಬಾಟಲಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಒಂದು ಹಿಟ್ಟಿನದೊಣ್ಣೆ, ಒಂದು ಪಾಸ್ಟಿಕ್ ಹಗ್ಗ ಮತ್ತು ಸ್ವಲ್ಪ ಸೀಮೆಎಣ್ಣೆ ಇರುವ ಪಾಸ್ಟಿಕ್ ಬಾಟಲಿಯನ್ನು ಈಗಾಗಲೇ ಮುದ್ದೆಮಾಲು **1** ರಿಂದ **3** ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲು ಃ- ಆರೋಪಿತರ ಪರ ವಕೀಲರಾದ ಶ್ರೀ ಕೆಬಿಕೆ ರವರಿಂದಃ-</u>

ದಿನಾಂಕ.**04.05.2012**ರಂದು ನಾನು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದರೆ ಸರಿ. ಮೊಕದ್ದಮೆ ಸಂಖ್ಯೆ **107/2012**ರಲ್ಲಿ ಆರೋಪಿತರನ್ನು ಪತ್ತೆ ಮಾಡುವಂತೆ ಚಾಸಾ-**8** ರವರು ನನಗೆ ಲಿಖಿತವಾಗಿ ಆದೇಶ ನೀಡಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೌಖಿಕವಾಗಿ ಆದೇಶ ನೀಡಿದ್ದರು ಎಂದು ನುಡಿಯುತ್ತಾರೆ. ದಿನಾಂಕ.**04.05.2012**ರಂದು ನಾನು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ನನಗೆ ಸಂಬಂಧಿಸಿದ ಹಾಜರಾತಿ ವಹಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿತರನ್ನು ಪತ್ತೆ ಮಾಡುವಂತೆ ಚಾಸಾ-**8** ರವರು ನನಗೆ ಆ ದಿನ ಬೆಳಿಗ್ಗೆ **8ಃ00** ಗಂಟೆಗೆ ತಿಳಿಸಿರುತ್ತಾರೆ. ನಾನು ಆ ದಿನ ಆರೋಪಿತರನ್ನು ಪತ್ತೆ ಮಾಡಲು ಆ ಊರಿಗೆ ಸಂಜೆ **5ಃ00** ಗಂಟೆಗೆ ಹೋಗಿರುತ್ತೇನೆ. ನಮ್ಮ ಪೊಲೀಸ್ ಠಾಣೆಯಿಂದ ಆ ಊರು **10** ಕೀ.ಮೀ ಅಂತರದಲ್ಲಿರುತ್ತದೆ. ಆ ದಿನ ನನ್ನ ಸ್ವಂತ ವಾಹನ ಸಂಖ್ಯೆ ಕೆಎ-**05**-ಇಬಿ-**2239**ರಲ್ಲಿ ಆ ಊರಿಗೆ ಹೋಗಿದ್ದೆ. ನಾನು ಮತ್ತು ಒಬ್ಬ ಬಾತ್ಮಿದಾರ ಇಬ್ಬರು ಆ ದಿನ ಆ ಜಾಗಕ್ಕೆ ಹೋಗಿರುತ್ತೇವೆ. ಆ ದಿನ ನಾನು **1**ನೇ ಆರೋಪಿಯ ಮನೆಗೆ ಹೋದಾಗ **1**ನೇ ಆರೋಪಿಯು ಅವರ ಮನೆಯ ಮುಂದೆ ನಿಂತಿದ್ದರು. ನಾನು ಹೋದತಕ್ಷಣ **1**ನೇ ಆರೋಪಿಗೆ ಪ್ರಕರಣದ ಬಗ್ಗೆ ತಿಳಿಸಿ ಅವರ ಕೈ ಹಿಡಿದುಕೊಂಡು ಬಂದೆ. ಆ ದಿನ **1**ನೇ ಆರೋಪಿಯನ್ನು ಕೈ ಹಿಡಿದುಕೊಂಡು ಕರೆದುಕೊಂಡು ಬರುವಂತೆ ಯಾವುದೇ ಆದೇಶ ಇರಲಿಲ್ಲ ಎಂದರೆ ಸಾಕ್ಷಿಯು ಕೇಸು ದಾಖಲಾಗಿತ್ತು, ಚಾಸಾ-**8** ರವರ ಮೌಖಿಕ ಆದೇಶ ಇತ್ತು ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ

ಯಾವುದೇ ಅರೆಸ್ಟ್ ವಾರೆಂಟ್ ಪಡೆದಿರಲಿಲ್ಲ ಎಂದರೆ ಸರಿ. ಆ ದಿನ ನಾನು ಮತ್ತು ಇತರೆ **5-6** ಜನರು ಬೆಳಿಕಾರಿನಲ್ಲಿ **1**ನೇ ಆರೋಪಿಯ ಮನೆಗೆ ಹೋಗಿದ್ದೇವು ಎಂದರೆ ಸರಿಯಲ್ಲ. ನಾವುಗಳು ಆ ದಿನ ಏಕಾಏಕಿ **1**ನೇ ಆರೋಪಿಯ ಮನೆಗೆ ನುಗ್ಗಿ ಮನೆಯಲ್ಲಿದ್ದ ಕಲಾವತಿ ಎನುವವರ ಕತ್ತಿನ ಪಟ್ಟಿಯನ್ನು ಹಿಡಿದು **1**ನೇ ಆರೋಪಿ ಎಲ್ಲಿ ಎಂದು ಕೇಳುತ್ತ ಆಕೆಯನ್ನು ಹೊರಗಡೆ ಎಳೆದುಕೊಂಡು ಬಂದೆವು ಎಂದರೆ ಸರಿಯಲ್ಲ. ಆಗ ಕಲಾವತಿ ರವರು ನೀವು ಯಾರು ಎಂದು ನಮ್ಮನ್ನು ಕೇಳಿದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಆ ದಿನ ಅವರ ಮನೆಯ ಒಳಗೆ ಹೋಗಲೆ ಇಲ್ಲ ಎಂದು ನುಡಿಯುತ್ತಾರೆ. **2**ನೇ ಆರೋಪಿಯ ಕೂರಳ ಪಟ್ಟಿ ಹಿಡಿದು ಎಳೆದುಕೊಂಡು ಬಂದ ಕಾರಣಕ್ಕೆ ಆಕೆಯ ಕೊರಳಿನಲ್ಲಿ ಉಗುರಿನಿಂದ ಪರಚಿ ಗಾಯವಾಗಿ ರಕ್ತ ಸಹ ಹೊಟ್ಟೆಯ ಭಾಗದ ವರೆಗೂ ಹರಿದಿತ್ತು ಎಂದರೆ ಸರಿಯಲ್ಲ. **2**ನೇ ಆರೋಪಿಯು ತೊಟ್ಟಿದ್ದ ನೈಟಿಯೆಲ್ಲ ರಕ್ತ ಆಗಿತ್ತು ಎಂದರೆ ಸರಿಯಲ್ಲ. ಆಗ **3** ಮತ್ತು **4**ನೇ ಆರೋಪಿತರು ಅಲ್ಲಿಗೆ ಬಂದು ಆಕೆಯನ್ನು ಬಿಡಿ ಎಂದು ನನ್ನನ್ನು ಕೇಳಿದರು ಎಂದರೆ ಸರಿಯಲ್ಲ. ಆಗ ನಾನು **2**ನೇ ಆರೋಪಿಯನ್ನು ಬಿಡದೆ ಮನೆಯ ಒಳಗಿನಿಂದ ಎಳೆದುಕೊಂಡು ಬರುವಾಗ ಉಳಿದ ಆರೋಪಿತರೆಲ್ಲರೂ ನನ್ನಿಂದ ಆಕೆಯನ್ನು ಬಿಡಿಸಲು ಪ್ರಯತ್ನಿಸಿದರು ಎಂದರೆ ಸರಿಯಲ್ಲ. ಆ ದಿನ ನೀವು ಸಮವಸ್ತ್ರದಲ್ಲಿ ಹೋಗಲು ನಿಮಗೆ ತೊಂದರೆ ಇತ್ತ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಆ ದಿನ ಸಮವಸ್ತ್ರದಲ್ಲಿಯೇ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. **2**ನೇ ಆರೋಪಿಯನ್ನು ಏಕೆ ಹಿಡಿದುಕೊಂಡಿದ್ದೀರಿ ಎಂದು ಕೇಳಿದಾಗಲೆ ನಾನು ಅವರಿಗೆ ಪೊಲೀಸ್ ಎಂಬ ವಿಚಾರ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಿಡದೆ **2**ನೇ ಆರೋಪಿಯನ್ನು ಹಿಡಿದು ಎಳೆದುಕೊಂಡು ಬಂದಿದ್ದಕ್ಕಾಗಿಯೇ **5**ನೇ ಆರೋಪಿ ವಿಷ ಕುಡಿದಿರುತ್ತಾರೆ ಎಂದರೆ ಸರಿಯಲ್ಲ. **5**ನೇ ಅರೋಪಿಯು ಮನೆಯ ಒಳಗಿನಿಂದ ಓಡಿಕೊಂಡು ಬಂದು ತಾವು ವಿಷ ಕುಡಿದಿರುವ ವಿಚಾರ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು **1**ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಹೋಗುತ್ತೇನೆಂದು **5**ನೇ ಆರೋಪಿ ವಿಷ ಕುಡಿದಿರುತ್ತಾರೆ ಎಂದು ನುಡಿಯುತ್ತಾರೆ. ವಿಷ ಕುಡಿದು ನಮಗೆ ಮತ್ತು ಆರೋಪಿತರಿಗೆ ಮಾತುಕತೆ ನಡೆಯುತ್ತಿದ್ದಾಗಲೇ **5**ನೇ ಆರೋಪಿ ಪ್ರಜ್ಞೆ ತಪ್ಪಿ ಬಿದ್ದರು ಎಂದರೆ ಸರಿಯಲ್ಲ.

**2.** ಆರೋಪಿತರು ಆ ದಿನ ತಾವುಗಳು ನಿರಿಕ್ಷಣಾ ಬೇಲು ತೆಗೆದುಕೊಂಡಿದ್ದರು ತಮ್ಮನ್ನು ಏಕೆ ಕರೆದುಕೊಂಡು ಹೋಗುತ್ತಿದ್ದೀರಾ ಎಂದು ನನಗೆ ಕೇಳಿದರು ಎಂದರೆ ಸರಿಯಲ್ಲ. ನಾನು ಅರುಣ್ ಕುಮಾರ್, ವೆಂಕಟೇಶ್ ಮತ್ತು ಇನ್ನೂ ನಾಲ್ಕು ಜನರು ಸೇರಿಕೊಂಡು ಆ ದಿನ **1**ನೇ ಆರೋಪಿಯ ಮನೆಯ ಬಳಿ ಹೋಗಿದ್ದೇವು ಎಂದರೆ ಸರಿಯಲ್ಲ. ಆರೋಪಿಯ ಮನೆಯ ಮುಂದೆ ಯಾವುದೇ ತೆಂಗಿನ ಮರ ಇಲ್ಲ ಎಂದರೆ ಸರಿಯಲ್ಲ. ತೆಂಗಿನ ಮರ ಸುಮಾರು **10** ರಿಂದ **12**ವರ್ಷದ ಹಳೆಯ ತೆಂಗಿನಮರವಾಗಿತ್ತು. ಸದರಿ ತೆಂಗಿನಮರವು **1**ನೇ ಆರೋಪಿಯ ಮನೆಯಿಂದ **4-5** ಅಡಿ ದೂರದಲ್ಲಿತ್ತು. **1**ನೇ ಆರೋಪಿಯ ಮನೆಯ ಉತ್ತರ ದಿಕ್ಕಿಗೆ ಸದರಿ ತೆಂಗಿನಮರವಿತ್ತು. ಆರೋಪಿಯ ಮನೆಯ ಮುಂದೆ ಯಾವುದೇ ತೆಂಗಿನಮರ ಇಲ್ಲ ಎಂದರೆ ಸರಿಯಲ್ಲ. **1**ನೇ ಆರೋಪಿಯ ಮನೆಯ ಮುಂದೆ ಸರ್ಕಾರಿ ರಸ್ತೆ ಇದೆ ಎಂದರೆ ಸಾಕ್ಷಿಯು ರಸ್ತೆ ಇರುವುದು ನಿಜ ಅದರೆ ಅದು ಯಾವ ರಸ್ತೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**3.** ಆರೋಪಿಯ ಮನೆಯ ಅಕ್ಕಪಕ್ಕ ಮನೆಗಳು ಇವೆ ಮತ್ತು ಅಲ್ಲಿ ಜನರು ವಾಸವಿದ್ದಾರೆ ಎಂದರೆ ಸರಿ. **1**ನೇ ಆರೋಪಿಯನ್ನು ಕರೆದುಕೊಂಡು ಬರುವುದಕ್ಕೂ ಮೊದಲು ಆತನ ಸಂಬಂಧಿಕರಿಗೆ ಆ ವಿಚಾರ ತಿಳಿಸಲಿಲ್ಲ. ಇದೆಲ್ಲಾ ನಡೆಯುವಷ್ಟರಲ್ಲಿ ಸುಮಾರು **20**ನಿಮಿಷ ಆಗಿರಬಹುದು. ಅಷ್ಟರಲ್ಲಿ ನಮ್ಮ ಪೊಲೀಸ್ ಠಾಣೆಯಿಂದ ಚಾಸಾ-**4** ರಿಂದ ಚಾಸಾ-**7** ರವರು ಸ್ಥಳಕ್ಕೆ ಬಂದರು ಎಂದರೆ ಸರಿ. ಆಗ ತಕ್ಷಣ ವಿಷ ಕುಡಿದ **5**ನೇ ಆರೋಪಿಯನ್ನು ಜೀಪಿನಲ್ಲಿ ಹಾಕಿಕೊಂಡು ನನ್ನನ್ನು ಕರೆದುಕೊಂಡು ಅವರು ಹೋದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನನ್ನು ಮತ್ತು **1**ನೇ ಆರೋಪಿಯನ್ನು ಮಾತ್ರ ಕರೆದುಕೊಂಡು ಹೋದರು ಎಂದು ನುಡಿಯುತ್ತಾರೆ.

**4.** ಆ ದಿನ **1**ನೇ ಆರೋಪಿ ನಿಮಗೆ ಹೊಡೆದಾಗ ನಿಮ್ಮ ಬಟ್ಟೆ ಹರಿದು ಹೋಗಿರಬಹುದು, ಬಟ್ಟೆಗೆ ರಕ್ತದ ಕಲೆಗಳು ಆಗಿರಬಹುದು ಅಲ್ಲವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬಟ್ಟೆ ಹರಿದಿರಲಿಲ್ಲ

ಆದರೆ ಬಟ್ಟೆಗೆ ಅಲ್ಲಲ್ಲಿ ಸಣ್ಣಪುಟ್ಟ ರಕ್ತದ ಕಲೆಗಳು ಆಗಿದ್ದವು ಎಂದು ನುಡಿಯುತ್ತಾರೆ. ಆ ದಿನ ನಾನು ತೊಟ್ಟಿದ್ದ ಬಟ್ಟೆಯನ್ನು ಪೊಲೀಸರಿಗೆ ಅಮಾನತ್ತುಪಡಿಸಿಕೊಳ್ಳಲು ನಾನು ಕೊಡಲಿಲ್ಲ. ನಾನು ಆ ದಿನ ಸಮವಸ್ತ್ರ ಧರಿಸಿರಲಿಲ್ಲ ಆ ಕಾರಣಕ್ಕಾಗಿ ಬಟ್ಟೆಗಳನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಕಡೆಯವರು **7-8** ಜನ ಮತ್ತು ಆರೋಪಿತರ ನಡುವೆ ಗಲಾಟೆ ನಡೆಯುವಾಗ ನಾನು ಪೊಲೀಸ್ ಎಂದು ಕಿರುಚಿಕೊಂಡೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಕಡೆಯಿಂದ **7-8** ಜನ ಇರಲಿಲ್ಲ, ನಾನು ಮತ್ತು ಬಾತ್ಮಿದಾರರು ಮಾತ್ರ ಇದ್ದೇವು ಎಂದು ನುಡಿಯುತ್ತಾರೆ. ನಾನು ಕಿರುಚಿ ಹೇಳುವವರೆಗೂ ನಾನು ಪೊಲೀಸ್ ಎಂಬ ವಿಚಾರ ಆರೋಪಿತರಿಗೆ ಗೊತ್ತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಆ ದಿನ ಸಮವಸ್ತ್ರದಲ್ಲಿದ್ದೆ ಎಂದು ನುಡಿಯುತ್ತಾರೆ.

**5.** ಮುರುಳಿದೊಡ್ಡಿ ಗ್ರಾಮದಿಂದ ಮರಳವಾಡಿಗೆ **2**ಕೀ.ಮಿ ಅಂತರ ಇದೆ ಎಂದರೆ ಸರಿ. ಮರಳವಾಡಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಹಾರೋಹಳ್ಳಿ ಪೊಲೀಸ್ ಠಾಣೆಯ ಹತ್ತಿರ ಒಂದು ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನನಗೆ ಯಾವುದಾದರೂ ಗಾಯಗಳು ಆಗಿದ್ದರೆ ಆ ದಿನ ಮರಳವಾಡಿ ಆಸ್ಪತ್ರೆಯಲ್ಲಿ ಆಗಲೀ ಹಾರೋಹಳ್ಳಿ ಆಸ್ಪತ್ರೆಂನುಲ್ಲಿ ಆಗಲೀ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಕೇವಲ ಗಾಯದ ಪ್ರಮಾಣ ಪತ್ರಕೋಸ್ಕರವೇ ಕನಕಪುರ ಸರ್ಕರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ಕಾರಿ ಆಸ್ಪತ್ರೆಗೆ ಆ ದಿನ ನಾನು ಒಬ್ಬನೇ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಆ ದಿನ ಮುಕ್ಕಾಲು ಗಂಟೆಯವರೆಗೂ ಇದ್ದು ಚಿಕಿತ್ಸೆ ಪಡೆದುಕೊಂಡಿರುತ್ತೇನೆ .ನಾನು ಆ ದಿನ ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**6.** ಮೊಕದ್ದಮೆ ಸಂಖ್ಯೆ **107/2012**ರ ಪಿರ್ಯಾದುದಾರರಾದ ಅರುಣ್ ಎನ್ನುವವರು ಮರಳು ದಂಧೆ ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ವಿಷಯವಾಗಿ ನನಗೂ ಅರುಣ್ ರವರಿಗೂ ಒಳ್ಳೆಯ ಆತ್ಮೀಯತೆ ಬೆಳೆದಿತ್ತು ಎಂದರೆ ಸರಿಯಲ್ಲ. ಊರಿನಲ್ಲಿ ಹೊಡೆದಾಟವಾಗಿದೆ ಎಂದು ತಿಮ್ಮರಾಯಿ ಮತ್ತು ಕುಮಾರ್ ರವರು ಸದರಿ ಅರುಣ್ ಮತ್ತು ಇತರರ ವಿರುದ್ದ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

**7.** ಆ ದಿನ ಮಹಜರ್ ನ್ನು ಬರೆಯಲು ಪೊಲೀಸ್ ಠಾಣೆಯನ್ನು ಬೆಳಿಗ್ಗೆ **9ಃ00** ಗಂಟೆಗೆ ಬಿಟ್ಟೆವು, ಮಹಜರ್ ನ್ನು ಬೆಳಿಗ್ಗೆ **10ಃ00** ರಿಂದ **10ಃ30** ರ ವರೆಗೂ ಸ್ಥಳದಲ್ಲಿ ಬರೆದವು. ಮಹಜರ್ ಮಾಡುವ ಕಾಲಕ್ಕೆ ಸಾಕಷ್ಟು ಜನರು ಸೇರಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಯಾರು ಇರಲಿಲ್ಲ, ಪಂಚರು ಮತ್ತು ನಾವು ಪೊಲೀಸರು ಮಾತ್ರ ಇದ್ದೆವು ಎಂದು ನುಡಿಯುತ್ತಾರೆ. ಮಹಜರ್ ತಯಾರಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸ್ಥಳದಲ್ಲಿ ಸ್ಥಳೀಯರ ಹೇಳಿಕೆಗಳನ್ನು ಪಡೆದುಕೊಂಡ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದು ತನಿಖಾಧಿಕಾರಿಗಳ ಕೆಲಸ ಎಂದು ನುಡಿಯುತ್ತಾರೆ.

**8.** ಮುದ್ದೆಮಾಲು **2**ನ್ನು ಪರೀಕ್ಷೆ ನಡೆಸಿ ಪರೀಕ್ಷಾ ವರದಿಯನ್ನು ತೆಗೆದುಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮುದ್ದೆಮಾಲು**-2**ರ ಮೇಲೆ ಪಂಚರ ಸಹಿಗಳನ್ನು ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿಯು ಅದು ತನಿಖಾಧಿಕಾರಿಗಳ ಕೆಲಸ ಎಂದು ನುಡಿಯುತ್ತಾರೆ. ಮುದ್ದೆಮಾಲು**-2**ರಂತಿರುವ ಪಾಸ್ಟಿಕ್ ಬಾಟಲ್ ಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಮುದ್ದೆಮಾಲು**-3** ರಂತಿರುವ ಹಗ್ಗಗಳು ಸಮಾನ್ಯವಾಗಿ ಹಸುಗಳನ್ನು ಇಟ್ಟುಕೊಂಡಂತಹ ಮನೆಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮುದ್ದೆಮಾಲು**-1** ಯಾವ ಮರದ ದೊಣ್ಣೆ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ. ಮುದ್ದೆಮಾಲು**-1** ರಂತೆ ಇರುವ ದೊಣ್ಣೆ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಮುದ್ದೆಮಾಲು **1** ರಿಂದ **3**ನ್ನು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿಲ್ಲ, ಅವುಗಳನ್ನು ಈ ಪ್ರಕರಣಕ್ಕಾಗಿಯೇ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದಲೆ **5**ನೇ ಆರೋಪಿ ವಿಷ ಕುಡಿದಿರುವ ಕಾರಣ ಆ ಆಪಾದನೆ ನನ್ನ ಮೇಲೆ ಬರುತ್ತದೆ ಎಂದು ಈ ಸುಳ್ಳು ಕೇಸನ್ನು ಸೃಷ್ಟಿಸಿ ಆರೋಪಿತರ ವಿರುದ್ದ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಪೊಲೀಸರು ಎಲ್ಲರೂ ಶ್ಯಾಮಿಲಾಗಿ ಆರೋಪಿತರ ವಿರುದ್ದ ಸುಳ್ಳು ಕೇಸನ್ನು ಸೃಷ್ಟಿಸಿ ಅದಕ್ಕೆ ಅನುಗುಣವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:- ಇಲ್ಲ</u>

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**